**ದಿನಾಂಕಃ 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ವಾದಿ ಪರ ಶ್ರೀ ಐ.ಬಿ.ಜೆ. ವಕೀಲರಿಂದಃ**

1. ದಾವಾ ಆಸ್ತಿ ಸರ್ವೆ ನಂ.212 ಇರುತ್ತದೆ, ಕ್ಷೇತ್ರ 4 ಎಕರೆ ಇರುತ್ತದೆ. ನಿರ್ಮಲಾ ನನ್ನ ಅಣ್ಣನ ಹೆಂಡತಿ ಆಗಬೇಕು ಮತ್ತು ಓಂಸಾಯಿ ನನ್ನ ಅಣ್ಣನ ಮಗನಾಗಬೇಕು. ನನ್ನ ಹೆಂಡತಿಯಾದ ಅವಿ, ನನ್ನ ಮಕ್ಕಳ ಹೆಸರು ಅಭೀಷಕ್ ಮತ್ತು ಅನೀಶ ಇರುತ್ತದೆ. ದಾವಾ ಆಸ್ತಿಯಲ್ಲಿ ಸದರಿಯವರ ಹೆಸರಗಳಲ್ಲಿ ನನ್ನ ಅತ್ತಿಗೆ ಮತ್ತು ನನ್ನ ಹೆಂಡತಿಯ ಹೆಸರು ನಮೂದು ಆಗಿರುತ್ತದೆ. ನನ್ನ ತಂದೆ ಗೆ ಪಾಶ್ವವಾಯು ಜನೇವರಿ-2014 ರಲ್ಲಿ ಆಗಿರುತ್ತದೆ. ನನ್ನ ತಂದೆ ಆರೋಗ್ಯ ಸರಿ ಇಲ್ಲದ ಕಾರಣ ವಾದಿಯ ಜೊತೆ 1,00,000/- ಪಡೆದುಕೊಂಡಿರುತ್ತೇನೆ ಎಂದು ತೋರಸಲು ಕಾಗದ ಪತ್ರಗಳು ಮಾಡಿಕೊಂಡಿದ್ದು, ಸದರಿ ದಾಖಲಾತಿ ಹಣ ಭದ್ರತೆಗೆ ಮಾಡಿಕೊಟ್ಟ ದಾಖಲಾತಿ ಆಗಿರುತ್ತದೆ ಎಂದು ನುಡಿಯುತ್ತಾರೆ.

2. ನಿಪಿ-1 ಖರೀದಿ ಕರಾರು ಪತ್ರವಾಗಿರುತ್ತದೆ ಎಂದರೆ ಸರಿ. ದಿಃ 30.04.2015 ರಂದು ನಾನು ಮತ್ತು ಸಂಜಯ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-1 ತೋರಿಸಿದ್ದು ಅದರಲ್ಲಿ ಇರುವ ಮೊದಲ ಸಹಿ ನನ್ನ ಅಣ್ಣನ ಸಹಿ ಆಗಿದ್ದು, ಎರಡನೆ ಸಹಿ ನನ್ನದು ಆಗಿರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ನಿಪಿ-1 ಎ ಮತ್ತು ನಿಪಿ-1 ಬಿ ಎಂದು ಗುರುತಿಸಲಾಯಿತು.

3. ನನ್ನ ತಂದೆಗೆ ಪಾಶ್ವವಾಯುದಿಂದ ಆರೋಗ್ಯ ಸರಿ ಇರಲ್ಲಿಲ್ಲಾ ಎಂದು ತೋರಿಸಲು ದಾಖಲಾತಿ ಇರುವುದಿಲ್ಲ, ಅವರಿಗೆ ಆರ್ಯುವೇಧಿಕ ಚಿಕಿತ್ಸೆ ನೀಡಿದ ಕಾರಣ ದಾಖಲಾತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರ್ಯುವೇಧಿಕ ಚಿಕಿತ್ಸೆ ನೀಡಿದ ವೈಧ್ಯರ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಯವರು ಪ್ರತಿ ಮುದ್ಧತಿಗೆ ನ್ಯಾಯಾಲಯಕ್ಕೆ ಬರುತ್ತಾರೆ ಎಂದರೆ ಸರಿ. ಇವತ್ತು ಸಹ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ.

4. 1 ಲಕ್ಷ ಗಳಿಗೆ 5% ಬಡ್ಡಿ ಎಂದು ಹಿರಿಯರ ಸಮಕ್ಷಮ ಮಾತುಕತೆ ಆಗಿರುತ್ತದೆ ಎಂದು ನಮೂದಿಸಿದ್ದು ಹಿರಿಯರ ಹೆಸರು ಏನು ಎಂದು ಕೇಳಿದ ಪ್ರಶ್ನೆಗೆ ಹಿರಿಯರ ಹೆಸರು ಸೀತಾರಾಮ ಚವ್ಹಾಣ ಮತ್ತು ರೇವಣು ರಾಠೋಡ ಆಗಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 30.04.2015 ರಂದು ಬರೆದುಕೊಟ್ಟ ಖರೀದಿ ಪತ್ರದಲ್ಲಿ ಇರುವ ಸಾಕ್ಷಿದಾರರು ಮತ್ತು ನಾನು ಹೇಳಿದ ಸಾಕ್ಷಿದಾರರು ಬೇರೆ ಬೇರೆ ಎಂದರೆ ಸರಿಯಲ್ಲ. ಸಿ.ಎಸ್.ಗಾಯಕ್ವಾಡ, ಆರ್.ವಿ. ರಾಠೋಡ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಗಂಡ ಹಣಮಂತ ಬೇಕಾಯ್ದೆಶೀರ ಲೇವಾದೇವಿ ಮಾಡುತ್ತಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿಯ ಗಂಡನಿಗೆ ಹಣ ನೀಡಿದ ಬಗ್ಗೆ ರಶೀದಿ ಇರುವುದಿಲ್ಲ, ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಹಣ ನೀಡಿದ ಬಗ್ಗೆ ರಶೀದಿ ಇರುವುದಿಲ್ಲ, ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದು, ಸಾಲದ ಸಲುವಾಗಿ ಹಣ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ವಾದಿಯು ವಕೀಲರ ಮೂಲಕ ನೋಟಿಸ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟಸನ್ನು ನಾನು ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ. ನೋಟಿಸ ಬಂದಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾಪಚೆಂಕ ಅಡಚಣೆ ಸಲುವಾಗಿ ಹಣವನ್ನು ಪಡೆದುಕೊಂಡು ಹಿಸಾರ ಪತ್ರವನ್ನು ಬರೆದುಕೊಟ್ಟಿದ್ದು, ನನ್ನ ತಂದೆಗೆ ಪಾಶ್ವವಾಯು ಆಗಿರುತ್ತದೆ ಎಂದು ಅಡಮಾನ ಪತ್ರ ಬರೆದುಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಉಪನೋಂದಾನಾಧಿಕಾರಿಯವರ ಕಛೇರಿಯಲ್ಲಿ ನೋಂದಣ ಆಗಿರುತ್ತದೆ ಎಂದರೆ ಸಾಕ್ಷಿಯು ಸಹಿ ಮಾಡು ಎಂದು ಹೇಳಿದ ಮೇರೆಗ ಮಾತ್ರ ಸಹಿ ಮಾಡಿರುತ್ತೇನೆ ಅದನ್ನು

ಹೊರತುಪಡಿಸಿ ನನಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖರೀದಿ ಹಿಸಾರ ಪತ್ರದಲಿಲ ನನ್ನ ಫೋಟೋ ಮತ್ತು ಹೆಬ್ಬಟ್ಟಿನ ಗುರುತು ಇರುತ್ತದೆ ಎಂದರೆ ಸರಿ. ನಾನು ಖರೀದಿ ಹಿಸಾರ ಪತ್ರವನ್ನು ಬರೆದುಕೊಟ್ಟರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**